# ಮೀಸೆ ತಿರುವಿದ ವಿಜಯ್!



ಕವಿತಾ ಲಂಕೇಶ್ ನಿರ್ದೇಶನದ ‘ಕರಿಯ ಕಣ್ ಬಿಟ್ಟ’ ಸಿನಿಮಾ ತಣ್ಣಗೆ ಸುದ್ದಿ ಮಾಡುತ್ತಿದೆ. ‘ದೇವೀರಿ’, ‘ಬಿಂಬ’, ‘ಪ್ರೀತಿ ಪ್ರೇಮ ಪ್ರಣಯ’ದಂಥ ವಿಭಿನ್ನ ಚಿತ್ರಗಳನ್ನು ನಿರ್ದೇಶಿಸಿದ್ದ ಕವಿತಾ ಇದೀಗ ‘ಕರಿಯ ಕಣ್ ಬಿಟ್ಟ’ ಸಿನಿಮಾದ ಮೂಲಕ ಮತ್ತೊಂದು ಪ್ರಯೋಗಶೀಲ ಚಿತ್ರದಲ್ಲಿ ತೊಡಗಿಕೊಂಡಂತೆ ಕಾಣಿಸುತ್ತಿದೆ. ಸುಬ್ಬು ಹೊಲೆಯಾರ್ ಅವರ ಕಥೆಯನ್ನಾಧರಿಸಿದ ಈ ಸಿನಿಮಾ ದಲಿತ ಬಾಲಕನೊಬ್ಬನ ತವಕ ತಲ್ಲಣಗಳನ್ನು ಹೊಸ ಕಾಲದ ಸವಾಲುಗಳ ಹಿನ್ನೆಲೆಯಲ್ಲಿ ಚರ್ಚಿಸುತ್ತದೆ. ಈ ವಿಭಿನ್ನ ಕಥೆಯ ಚಿತ್ರದ ಎರಡು ಪ್ರಮುಖ ಪಾತ್ರಗಳಲ್ಲಿ ವಿಜಯ್ ಹಾಗೂ ಯೋಗೀಶ್ ನಟಿಸುತ್ತಿರುವುದು ಸಿನಿಮಾದ ವಿಶೇಷಗಳಲ್ಲೊಂದು.

ವಿಜಯ್ ಹಾಗೂ ಯೋಗೀಶ್ ಇಬ್ಬರೂ ‘ದುನಿಯಾ’ ಚಿತ್ರದ ಮೂಲಕ ಗಾಂಧಿನಗರದ ಗಮನ ಸೆಳೆದವರು. ಅದಾದ ಏಳು ವರ್ಷಗಳ ನಂತರ ಇಬ್ಬರೂ ಒಂದೇ ಸಿನಿಮಾದಲ್ಲಿ, ನಟನೆಗೆ ಅವಕಾಶವಿರುವ ಪಾತ್ರಗಳಲ್ಲಿ ನಟಿಸುತ್ತಿದ್ದಾರಂತೆ. ಯೋಗಿ ಅವರು ಶಬರಿಮಲೆ ಯಾತ್ರೆಯ ಕಪ್ಪು ಬಟ್ಟೆಗಳಲ್ಲಿ ಕಾಣಿಸಿಕೊಂಡಿರುವ ಚಿತ್ರದ ಸ್ಟಿಲ್‌ಗಳು ಈಗಾಗಲೇ ಬಿಡುಗಡೆಯಾಗಿವೆ. ಇದೀಗ ವಿಜಯ್ ಹಳ್ಳಿಗೌಡನ ಪಾತ್ರದಲ್ಲಿ ಮೀಸೆ ತಿರುವುತ್ತಿರುವ ಫೋಟೊಗಳ ಸರದಿ.

ಅಂದ ಹಾಗೆ, ಕವಿತಾ ಹಾಗೂ ವಿಜಯ್ ಚಿತ್ರವೊಂದರಲ್ಲಿ ಕೆಲಸ ಮಾಡುತ್ತಿರುವುದು ಇದು ಮೊದಲೇನಲ್ಲ. ಈ ಮೊದಲು ಕವಿತಾ ನಿರ್ದೇಶನದ ‘ಅವ್ವ’ ಸಿನಿಮಾದಲ್ಲಿ ವಿಜಯ್ ನಟಿಸಿದ್ದರು. ಕಲಾವಿದನಾಗಿ ವಿಜಯ್ ಅವರ ಸಾಧ್ಯತೆಗಳ ಬಗ್ಗೆ ಕವಿತಾ ಅವರಿಗೆ ಮೆಚ್ಚುಗೆಯಿದೆ. ‘ಕರಿಯ ಕಣ್ ಬಿಟ್ಟ’ ಚಿತ್ರದ ಗೌಡನ ಪಾತ್ರವನ್ನಂತೂ ಅವರು ಆವಾಹಿಸಿಕೊಂಡಿದ್ದಾರಂತೆ. ಈ ಪಾತ್ರ, ಸಾಮಾನ್ಯವಾಗಿ ಸಿನಿಮಾಗಳಲ್ಲಿ ಕಾಣಿಸಿಕೊಳ್ಳುವ ಶ್ರೀಮಂತಿಕೆಯ ಪೋಷಾಕಿನ ಹಾಗೂ ಅಟ್ಟಹಾಸದ ಚರ್ವಿತ ಚರ್ವಣ ಗೌಡನ ಪಾತ್ರಕ್ಕೆ ವಿರುದ್ಧವಾಗಿದೆಯಂತೆ.

■ ರಘು

